ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly, KOPPA-CHM. ಫೋನ್ : ೧೧೪

೧೦ನೇ ವರ್ಷ ೨ನೇ ಸಂಚಿಕೆ ಕೊಪ್ಪ ೧೩-೧-೧೯೯೧ ಭಾನುವಾರ ಬೆಲೆ ೬೦ ಪೈಸೆ

'ಕುವೆಂಪು ಸಂದೇಶ ಭವನ' ಉದ್ಘಾಟನೆ

ಕೊಪ್ಪ: ರಾಷ್ಟ್ರಕವಿ ಕುವೆಂಪು ಜನಿಸಿದ ಅವರ ತಾಯಿಯ ತವರೂರಾದ ಇಲ್ಲಿಗೆ ಸಮೀಪದ ಹಿರೇಕೊಡಿಗೆಯಲ್ಲಿ ಜ. ೭ರಂದು ಕುವೆಂಪುರವರ ಸಂದೇಶ ಭವನ ಮತ್ತು ಪ್ರತಿಮೆಯನ್ನು ಅನಾವರಣ ಮಾಡಿದ ಸಣ್ಣ ನೀರಾವರಿ ಖಾತೆ ಸಚಿವ ಮಲ್ಲಿಕಾರ್ಜುನ ಪ್ರಸನ್ನ ಅವರು, ಇದನ್ನು ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಬೇಕೆಂದೂ, ಇಲ್ಲಿ ಒಂದು ಸಂಶೋಧನಾ ಕೇಂದ್ರ, ಕುವೆಂಪು ವನ ಮತ್ತು ವಸ್ತು ಸಂಗ್ರಾಲಯ ನಿರ್ಮಿಸಬೇಕೆಂದೂ ಅಪೇಕ್ಷಿಸಿದರು.

ಮೈಸೂರು ವಿ. ವಿ. ನಿಲಯದ ಮಾಜಿ ಉಪಕುಲಪತಿಗಳಾದ ದೇ. ಜವರೇಗೌಡರು ಮುಖ್ಯ ಅತಿಥಿಯಾಗಿ ಮಾತನಾಡುತ್ತಾ ಕುವೆಂಪುರವರು ಮಲೆನಾಡಿನ ಹಿರಿಮೆಯನ್ನು ರಾಜ್ಯ-ರಾಷ್ಟ್ರ ಮಟ್ಟದಿಂದ ಅಂತರರಾಷ್ಟ್ರೀಯ ಮಟ್ಟಕ್ಕೇರಿಸಿದ ಮೇಧಾವಿ. ಅಂಥವರ ಸಂದೇಶಗಳನ್ನು ನಮ್ಮ ಜೀವನದಲ್ಲೂ ಪಾಲಿಸುವ ರೂಢಿ ಬರಬೇಕು ಎಂದರು.

ಕುವೆಂಪು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಲಕ್ಕಪ್ಪಗೌಡರು ಕುವೆಂಪುರವರ ಕೆಲವು ಕವಿತೆಗಳನ್ನು ಹಾಡಿ, ವಿಶ್ವಮಾನವ ಸಂದೇಶದ ತಿರುಳನ್ನು ಮನಮುಟ್ಟುವಂತೆ ವಿವರಿಸಿದರು.

ಜಿಲ್ಲಾ ಪರಿಷತ್ ಅಧ್ಯಕ್ಷ ಬಿ. ಎಲ್. ರಾಮದಾಸ್ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಶಾಮಣ್ಣ, ಉಪನ್ಯಾಸಕ ಕಾಳೇಗೌಡ, ಜಿಲ್ಲಾಧಿಕಾರಿ ಡಾ॥ ಎಸ್. ಸುಬ್ರಮಣ್ಯ, ಜಿ ಪ ಮಾಜಿ ಮುಖ್ಯ ಕಾರ್ಯದರ್ಶಿ ಚಂದ್ರಹಾಸ ಗುಪ್ತ, ಜಿ.ಪ. ಸದಸ್ಯರುಗಳು ಮುಖ್ಯ ಅತಿಥಿಗಳಾಗಿದ್ದರು. ಜಿ. ಪ. ಮುಖ್ಯ ಕಾರ್ಯದರ್ಶಿ ಲೋಕರೆ ಸ್ವಾಗತಿಸಿ ವಂದಿಸಿದರು. (ವರದಿ: ವಸಂತ್ ಹರ್ಡೀಕರ್)

ಶೃಂಗೇರಿಯಲ್ಲೊಬ್ಬ 'ಚೂರಿ ಚಿಕ್ಕಣ್ಣ' !

ಚಾಕು ತೋರಿಸಿ ಪೋಲೀಸರನ್ನೂ ಓಡಿಸಿ ರಿಕ್ಷಾ 'ಹೈಜಾಕ್' ಮಾಡಿದ ಪ್ರಕರಣ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಇಬ್ಬರು ಪೋಲೀಸರು ಸೇರಿದಂತೆ ನೂರಾರು ಜನರಿಗೆ ಚಾಕು ತೋರಿಸಿ ಹೆದರಿಸಿ, ಆಟೋ ರಿಕ್ಷಾವೊಂದನ್ನು ಬಲಾತ್ಕಾರವಾಗಿ 'ಹೈಜಾಕ್' ಮಾಡಿ ಒಯ್ದ ಪ್ರಕರಣ ಜ ೬ರ ಭಾನುವಾರ ಇಲ್ಲಿ ನಡೆಯಿತು

ಕೆರೆಕಟ್ಟೆ ಸಮೀಪ ಹಾಲ್ಮಕ್ಕಿಯ ರವಿ ಎಂಬಾತ ತನ್ನ ಐವರು ಸಂಗಾತಿಗಳೊಂದಿಗೆ ಈ ಕೃತ್ಯ ಎಸಗಿದ್ದು, ಆದರು ಚೂರಿ ತೋರಿಸಿ ಎಳೆದೊಯ್ದ ರಿಕ್ಷಾವನ್ನೂ ಅವರ ಡ್ರೈವರ್ ಸುಬ್ರಮಣ್ಯ ಉಪಾಧ್ಯನನ್ನೂ ಸಾರ್ವಜನಿಕರ ನೆರವಿನಿಂದ ಬೇಗಾನೆ ಸಮೀಪ ಪತ್ತೆ ಹಚ್ಚಲಾಯಿತು.

ಗಂಧ ತುಂಬಿಸಲು ಈ ಕೃತ್ಯ ನಡೆಯಿತೆಂದು ಬಲವಾದ ಊಹೆಯಿದೆ. ಆದರೆ ಆಟೋ ಡ್ರೈವರ್ ಜೀವ ಭಯದಿಂದಾಗಿ ಏನೂ ಹೇಳುತ್ತಿಲ್ಲ.

ಮಂಗಳೂರಿನ ಕಪ್ಪು ಧಂಧೆಗಳಲ್ಲಿದ್ದನೆನ್ನಲಾಗಿರುವ ಈ ರವಿ ಈಗ್ಗೆ ಐದಾರು ತಿಂಗಳಿಂದ ಶೃಂಗೇರಿಯಲ್ಲೂ ಕೆರೆಕಟ್ಟೆ ಆಸುಪಾಸಿನಲ್ಲೂ ಪದೇ ಪದೇ ಗಲಾಟೆ ಎಬ್ಬಿಸುತ್ತ, ಸಿಕ್ಕ ಸಿಕ್ಕವರಿಗೆ ಚಾಕು ತೋರಿಸಿ ಬೆದರಿಸುವುದು, ಹಲ್ಲೆ ಮುಂತಾದುವನ್ನು ನಡೆಸುತ್ತಿದ್ದು ಅಂಥದೊಂದು ಪ್ರಕರಣದಲ್ಲಿ ಅವನಿಗೆ ಚೆನ್ನಾಗಿ 'ಬಂದೋಬಸ್ತ್' ಮಾಡಿದ್ದ ಶೃಂಗೇರಿಯ ಸಬ್ ಇನ್‌ಸ್ಪೆಕ್ಟರಿಗೂ ಚಾಕು ಹಾಕುವುದಾಗಿ, ಠಾಣೆಗೆ ಡೈನಮೈಟ್ ಹಾಕುವುದಾಗಿ ಹೇಳಿಕೊಂಡು ತಿರುಗುತ್ತಿದ್ದಾನೆನ್ನಲಾಗಿದೆ.

ಇಲ್ಲಿನ ಕೆಲ ಪುಂಡರನ್ನು ಗಂಧ ಚೋರ ಯುವಕರನ್ನು ಗುಂಪು ಕಟ್ಟಿಕೊಂಡು ವೀರಪ್ಪನ್‌ನಂಥ ಕ್ರೌರ್ಯದೊಂದಿಗೆ ಧೂಮಕೇತುವಿನಂತೆ ಬೆಳೆಯುತ್ತಿರುವ ಈತನನ್ನು ಇಷ್ಟಕ್ಕೇ ನಿಗ್ರಹಿಸಲು ಇಲ್ಲಿನ-ಅಷ್ಟೇಕೆ, ಜಿಲ್ಲೆಯ—ಪೋಲೀಸ್ ಇಲಾಖೆ ಇನ್ನೂ ಸಮರ್ಥವಾಗಿಲ್ಲ.

ಜ. ೧೬ರಂದು ಕೊಪ್ಪದಲ್ಲಿ ಅಡಿಕೆ ಸುಲಿವ ಯಂತ್ರ ಪ್ರದರ್ಶನ

ಕೊಪ್ಪ : ಕೃಷಿ ಕುಟುಂಬದವರಲ್ಲದ ಶೃಂಗೇರಿಯ ತರುಣ ಇಂಜಿನಿಯರ್ ಸೋಮನಾಥ ಅಯ್ಯರ್ ನಾಲ್ಕೈದು ವರ್ಷದಿಂದ ಸತತ ಸಂಶೋಧನೆ ನಡೆಸಿ ಸಿದ್ಧಪಡಿಸಿರುವ ಅಡಿಕೆ ಸುಲಿಯುವ ಯಂತ್ರದ ಪ್ರದರ್ಶನ ಜ. ೧೬ನೇ ಬುಧವಾರ ಮಧ್ಯಾಹ್ನ ೩ ಕ್ಕೆ ದೇವೇಗೌಡಸರ್ಕಲ್ ಸಮೀಪದ ಬೇಲಿಹಳ್ಳಿ ರಾಮಚಂದ್ರರಾವ್ ಅವರ ಕೃಷಿಕ್ಷೇತ್ರದಲ್ಲಿ ನಡೆಯಲಿದೆ

ಬಗರ್‌ಹುಕುಂಸಾಗುವಳಿದಾರರ ಸಮಾವೇಶ

ಚಿಕ್ಕಮಗಳೂರು : ಸಣ್ಣ ರೈತರ ಬಗರ್ ಹುಕುಂ ಸಾಗುವಳಿಯನ್ನು ಖಾಯಂಗೊಳಿಸುವ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿರುವ ಜಿಲ್ಲಾ ಸಿಪಿಐ, ಈ ಬಗ್ಗೆ ಅರೆಬರೆಯ ಮತ್ತು ಅವೈಜ್ಞಾನಿಕ ಆದೇಶಗಳನ್ನು ಜಾರಿ ಮಾಡದೆ, ಲೋಪದೋಷ ರಹಿತವಾಗಿ ಜಾರಿಗೊಳಿಸಬೇಕೆಂದು ಆಗ್ರಹಿಸಿದೆ ಹಾಗೂ ಜಿಲ್ಲೆಯ ಬಗರ್ ಹುಕುಂ ಸಾಗುವಳಿದಾರರ ಸಮಾವೇಶವನ್ನು ಜ. ೧೮ ರಂದು ಇಲ್ಲಿ ನಡೆಸಲು ನಿರ್ಧರಿಸಿದೆ.

ಗಣರಾಜ್ಯೋತ್ಸವ ದಿನ

ಈ ಬಾರಿಯ ಗಣರಾಜ್ಯೋತ್ಸವ ದಿನವನ್ನು (ಜ. ೨೬) ದೇಶದ ಐಕ್ಯತೆ ಮತ್ತು ಸಂವಿಧಾನದ ಸಾರ್ವಭೌಮತೆಯ ಅರ್ಥಪೂರ್ಣ ದಿನವನ್ನಾಗಿ ಆಚರಿಸಲು ಪಕ್ಷ ಕರೆ ನೀಡಿದೆ. ಈ ಬಗ್ಗೆ ಜ. ೨೬ ಮತ್ತು ೨೭ ರಂದು ನಗರದಲ್ಲಿ ೨ ದಿನಗಳ ವಿಚಾರ ಸಂಕಿರಣ ಮತ್ತು ಅಧ್ಯಯನ ಶಿಬಿರ ನಡೆಸಲು ನಿರ್ಧರಿಸಿದೆ.

ಗಾಂಧೀಜಿ ಹುತಾತ್ಮರಾದ ದಿನದಂದು (ಜ.೩೦) ಜಾತಿವಾದ ವಿರೋಧಿ ದಿನಾಚರಣೆ ನಡೆಸಲೂ ನಿರ್ಧರಿಸಲಾಗಿದೆ.

"ಕಾರ್ಮಿಕರ ಬೇಡಿಕೆ ಈಡೇರಿಸಿ ಜನರ ಬವಣೆ ನಿವಾರಿಸಿ"

ಕೊಪ್ಪ : ಶಂಕರ್ ಸಾರಿಗೆಯ ಮಾಲೀಕರು ಕೂಡಲೇ ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿ, ಸಾರ್ವಜನಿಕರಿಗೆ ಉಂಟಾಗಿರುವ ಬವಣೆಯನ್ನು ನಿವಾರಿಸಬೇಕೆಂದು ಇಲ್ಲಿನ ಸಾರ್ವಜನಿಕ ಹಿತರಕ್ಷಣಾ ಸಮಿತಿಯ ನೂತನ ಅಧ್ಯಕ್ಷ ವಕೀಲ ಎ.ಟಿ. ಕಂಠಿ ಒತ್ತಾಯಿಸಿದ್ದಾರೆ.

ರೈತರಿಗೆ ಉಪಯುಕ್ತವಾದ ಭೂ ಬ್ಯಾಂಕಿನ ಸಾಮಾನ್ಯ ಸಾಲ ಯೋಜನೆ ಮಂಜೂರು

ಕೊಪ್ಪ : ರೈತರಿಗೆ ತೋಟದಮನೆ ಮತ್ತು ಕೊಟ್ಟಿಗೆ ನಿರ್ಮಾಣಕ್ಕೆ, ತಂತಿ ಬೇಲಿಗೆ ಹಾಗೂ ಬಾಗಾಯ್ತು ರಿಪೇರಿಗೆ (ಎಕರೆಗೆ ೬ ಸಾವಿರ ರೂ.ಗಳಂತೆ) ಗರಿಷ್ಠ ೧೫ ಸಾವಿರ ರೂ. ಗಳ ಸಾಲವನ್ನು ಶೇ. ೧೨.೫ರ ಬಡ್ಡಿಯಲ್ಲಿ ಸಾಮಾನ್ಯ ಯೋಜನೆಯಡಿ ನೀಡಲಾಗುವುದು.

ಕೊಪ್ಪದ ಬ್ಯಾಂಕಿಗೆ ಈ ಬಾಬ್ತು ೧೦ ಲಕ್ಷ ರೂ. ಗಳು ಮಂಜೂರಾಗಿದ್ದು, ಅರ್ಹ ರೈತರು ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳುವಂತೆ ಕಾರ್ಯದರ್ಶಿ ಜಯದೇವಪ್ಪ ವಿನಂತಿಸಿದ್ದಾರೆ. ಇದೇ ಬಾಬುಗಳಿಗೆ ಕೇಂದ್ರ ಬ್ಯಾಂಕಿನಲ್ಲಿ ಗರಿಷ್ಠ ಮಿತಿ ೨೫ ಸಾವಿರ ರೂ. ಇರುತ್ತದೆ.

ವ್ಯ. ಮಾ. ಸ. ವಾಹನ ಬಳಸಿಕೊಳ್ಳಲು ರೈತರಿಗೆ ಕರೆ

ಶಿವಮೊಗ್ಗ : ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ರೈತರ ಉಪಯೋಗಕ್ಕಾಗಿ ಇಲ್ಲಿನ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ ಕನಿಷ್ಠ ಸಾಗಣೆ ದರದಲ್ಲಿ ಒದಗಿಸಿರುವ ಲಾರಿ ಸೌಲಭ್ಯವನ್ನು ಬೆಳೆಗಾರರೆಲ್ಲ ಸದುಪಯೋಗಪಡಿಸಿಕೊಳ್ಳುವಂತೆ ವ್ಯ ಮಾ ಸ. ಕಾರ್ಯದರ್ಶಿಗಳು ವಿನಂತಿಸಿದ್ದಾರೆ

ಡೀಸೆಲ್ ಅಭಾವದ ಕಾರಣ, ಒಂದು ಸ್ಥಳದಲ್ಲಿ ೧೦೦ ಮೂಟೆಗಳಿಗೆ ಕಡಿಮೆಯಿಲ್ಲದಂತೆ ಸಂಗ್ರಹಿಸಿಟ್ಟು ಲಾರಿ ತರಿಸಿಕೊಳ್ಳುವಂತೆಯೂ ಅವರು ಕೋರಿದ್ದಾರೆ.

ಸಂಧಾನ ವಿಫಲ : ಮುಂದುವರಿದ ಶಂಕರ್ ಸಾರಿಗೆ ಮುಷ್ಕರ; 'ಆಟಕ್ಕುಂಟು-ಲೆಕ್ಕಕ್ಕಿಲ್ಲ'ದ ರಾಜ್ಯ ಸಾರಿಗೆ ಬಸ್‌ಗಳು

ಕೊಪ್ಪ : ಶಂಕರ್ ಸಾರಿಗೆ ಮುಷ್ಕರದ ಹಿನ್ನೆಲೆಯಲ್ಲಿ ಜ ೮ರಂದು ಬೆಂಗಳೂರಿನಲ್ಲಿ ಕಾರ್ಮಿಕ ಕಮಿಶನರ್ ಮುಂದೆ ಮಾಲೀಕರಿಗೂ ಸಂಘಕ್ಕೂ ನಡೆದ ಮಾತುಕತೆ ಫಲಪ್ರದವಾಗಿಲ್ಲ.

ಪುನಃ ಜ. ೧೬ರಂದು ಮಾತುಕತೆ ನಡೆಯುವ ಸಂಭವವಿದ್ದು, **ಅಷ್ಟರಲ್ಲಿ ಕೊಲ್ಲಿ ಯುದ್ಧ ಆರಂಭವಾಗದೇ ಹೋದಲ್ಲಿ (ಡೀಸೆಲ್ ಪೂರೈಕೆ ಪೂರ್ಣ ಬಂದ್ ಆಗದಿದ್ದಲ್ಲಿ)** ಸಂಧಾನ ಏರ್ಪಡುವ ನಿರೀಕ್ಷೆ ಇದೆ ಎನ್ನಲಾಗಿದೆ.

ವ್ಯರ್ಥ ರಾಜ್ಯ ರಸ್ತೆ ಸಾರಿಗೆ

ಕಳೆದ ಬಾರಿ (೩ ವರ್ಷದ ಹಿಂದೆ) ಮುಷ್ಕರ ನಡೆದಾಗ ಸಾಕಷ್ಟು ಒಳ್ಳೆಯ ರೀತಿ ಕಾರ್ಯ ನಿರ್ವಹಿಸಿದ್ದ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ಈ ಬಾರಿ ಪೂರ್ಣ ವಿಫಲವಾಗಿವೆ. ಯಾವ ಮಾರ್ಗದಲ್ಲೂ ಬಸ್ ಓಡಾಟ ಸುಸೂತ್ರವಾಗಿಲ್ಲ. ಕಟ್ಟಿನಮನೆ, ಮೇಲ್ಪಾಲು, ಬಸರಿಕಟ್ಟೆ, ಬೆಳವಿನಕೊಡಿಗೆಗಳಂಥ ಒಳ ಭಾಗದ ಊರುಗಳ ಮಾತಿರಲಿ, ಮುಖ್ಯ ಮಾರ್ಗಗಳಲ್ಲೇ ಬಸ್ ಓಡಾಟ ಸರಿಯಿಲ್ಲ. ಪರೀಕ್ಷೆ ಹತ್ತಿರ ಬಂದಿರುವ ಶಾಲಾ–ಕಾಲೇಜು ವಿದ್ಯಾರ್ಥಿಗಳ ಪರದಾಟಕ್ಕೆ ಕೊನೆಯೇ ಇಲ್ಲ.

ಜಯಪುರ–ಚಿಕ್ಕಮಗಳೂರು ಮಾರ್ಗದಲ್ಲಿ ಒಂದರ ಹಿಂದೊಂದರಂತೆ ಒಂದೇ ಸಲ ೨-೩ ಬಸ್‌ಗಳು ಓಡಾಡಿ ಮತ್ತೆ ಒಂದು ಇಡೀ ಹೊತ್ತು ಬಸ್ ಇರುವುದಿಲ್ಲ ಡಿ. ೨೮ ರಂದು ಎಸ್ಪಿ ಸಭೆಯಲ್ಲೇ ಈ ವಿಚಾರ ತಿಳಿಸಿದ್ದರೂ ಈಗಲೂ ಹಾಗೇ ಮುಂದುವರಿದಿದೆ.

ಬೇರೆ ಖಾಸಗಿ ಬಸ್‌ಗಳ ಓಡಾಟ ತಕ್ಕಮಟ್ಟಿಗಿರುವ ಕೊಪ್ಪ–ಶೃಂಗೇರಿ ಮತ್ತು ಕೊಪ್ಪ – ತೀರ್ಥಹಳ್ಳಿ ಮಾರ್ಗಗಳಲ್ಲೂ ಕೆಲವು ಸರ್ಕಾರಿ ಬಸ್‌ಗಳು ಓಡಾಡುತ್ತವಾದರೂ, ಸಂಪೂರ್ಣ ಶಂಕರ್ ಸಂಸ್ಥೆಯ 'ಮೊನೋಪಲಿ'ಯಾಗಿದ್ದ ಕೊಪ್ಪ–ಆಗುಂಬೆ ಮತ್ತು ಶೃಂಗೇರಿ–ಆಗುಂಬೆ ಮಾರ್ಗಗಳಲ್ಲಿ ರಾಜ್ಯ ರಸ್ತೆ ಸಾರಿಗೆ ವ್ಯವಸ್ಥೆ ಏನೇನೂ ಸಾಲದು. ಕೊಪ್ಪ–ಆಗುಂಬೆ ಮಧ್ಯೆ ದಿನಕ್ಕೆ ಕೇವಲ ೩ ಬಸ್‌ಗಳು ಯಾವ್ಯಾವುದೋ ಸಮಯದಲ್ಲಿ ಓಡಾಡುತ್ತವೆ. ಶೃಂಗೇರಿ–ಆಗುಂಬೆ ಮಧ್ಯೆ ಇಷ್ಟವೇ ಇಲ್ಲ

ಗುಂಡಿಟ್ಟು ಅಡಗಿಸಿದ್ದು 'ತುಷ್ಟೀಕರಣ ನೀತಿ'ಯನ್ನೋ ಅಥವಾ....?

ಪ್ರಿಯ ನಾಗರಾಜ್,

ನಿಮ್ಮ 'ವೇದಿಕೆ'ಯ ಸಂವಾದದಲ್ಲಿ ಭಾಗವಹಿಸುವಂತೆ ನೀವು ಸೂಚಿಸಿದಾಗ ನಾನು ಒಪ್ಪಿಕೊಂಡಿದ್ದೆ. ಆದರೆ ನನಗೇಕೋ ಬರೆಯಲಾರದಷ್ಟು ಆತಂಕ, ತಳಮಳ ಉಂಟಾಗಿದೆ. ಇದು ನನ್ನ ಮಿತಿಯೂ ಇರಬಹುದು.

ಚಿಕ್ಕ ಹುಡುಗನಿದ್ದಾಗ ಒಮ್ಮೆ ಗೋಲಿಯಾಟದ ಸಂದರ್ಭದಲ್ಲಿ ನನ್ನ ಸಹಪಾಠಿಯೊಂದಿಗೆ ಜಗಳ ಕಾದಿದ್ದೆ. ಪರೀಕ್ಷೆ ಮುಗಿದು ಫಲಿತಾಂಶ ಬಂದ ದಿನ ನನಗಿಂತ ಮೊದಲೇ ಶಾಲೆಗೆ ಹೋಗಿ ಬಂದ ಆತ "ನೀನೂ ಪಾಸಾಗಿದ್ದಿ" ಎಂದು ಹೇಳಿ ಹೋದ. ನನಗೆ ತಕ್ಷಣ ಅನಿಸಿದ್ದು—ಈ "ಶತ್ರು" ನಾನು ಫೇಲಾದುದಕ್ಕೆ ಹೀಗೆ ತೆಗಳಿರಬೇಕು ಎಂಬ ಭ್ರಮೆ (ನಿಜವಾಗಿ ನಾನು ಪಾಸಾಗಿದ್ದೆ)

ವೇದಿಕೆಯ ಸಂವಾದಗಳನ್ನು ಓದಿದವರ ಗತಿ–ಅವರಿಗೆ ಅರ್ಥವಾಗುವ ರೀತಿ ಹೀಗಾದರೆ? ಎಂಬ ಚಿಂತೆ ಕಾಡುತ್ತದೆ. ಸಂವಾದದಲ್ಲಿ ಬಂದ ಲೇಖನಗಳಲ್ಲಿ ಹೆಚ್ಚಿನವು ಇಂಥ ಪ್ರತಿಕ್ರಿಯೆ ಎನಿಸಿಬಿಟ್ಟಿದೆ !

"ಈಗಿರುವ ಮಸೀದಿ ಅದರಷ್ಟಕ್ಕೆ ಅಲ್ಲೇ ಇರಲಿ, ಅದನ್ನು ಕೆಡಹುವುದರಿಂದ ಇಡೀ ಒಂದು ಜನಸಮುದಾಯಕ್ಕೆ ನಾವು ನೀಡುವ ಆಘಾತವಾಗಿ ಪರಿಣಮಿಸುತ್ತದೆ. ಪುನಃ ಆ ಜನಸಮುದಾಯವನ್ನು ಸಂಕೋಚವಿಲ್ಲದೆ 'ನಮ್ಮ ದೇಶೀಯರು' ಎಂದು ಪ್ರೀತಿಯಿಂದ, ಮಾನವೀಯ ಗೌರವದಿಂದ ಕಾಣಲು ಸಾಧ್ಯವಾಗುವುದಿಲ್ಲ" ಎಂದು ಬರೆದರೆ, ನಿಜವಾಗಿಯೂ ಈತ ಇಸ್ಲಾಂ ಧರ್ಮದವರನ್ನು 'ಓಲೈಸುವವ' ಎಂಬ ಹಣೆಪಟ್ಟಿಯನ್ನು ಕಟ್ಟಿಯೇ ಉಳಿದದ್ದನ್ನೆಲ್ಲಾ ಅರ್ಥೈಸುತ್ತಾರೆ. ಇತಿಹಾಸದ ಯಾವುದೋ ಘಟ್ಟದಲ್ಲಿ ನಡೆದಿರಬಹುದಾದ ಅಸಂಗತವನ್ನು(?) ಸರಿಪಡಿಸುವ ಉಮೇದಿನಲ್ಲಿ ಶಾಶ್ವತ ದ್ವೇಷವನ್ನು ಉಳಿಸಿಕೊಳ್ಳುತ್ತಿದ್ದೇವೆ ಎನ್ನುವ ಅರಿವು ನಮಗಾಗುವುದೆ ? ಎಂಬ ಸಂದೇಹ ನನಗೆ ಕಾಡುತ್ತದೆ.

ಇದನ್ನು ಬಿಟ್ಟು, ಇತಿಹಾಸದ ದಾಖಲೆಗಳ ಪರೀಕ್ಷೆಗೆ ಹೊರಟಾಗ ಎರಡು ಗುಂಪುಗಳಾಗಿ ತಮ್ಮ ತಮ್ಮ ವಾದಗಳಿಗೆ ಬೇಕಾದ ಆಧಾರಗಳನ್ನು ಒದಗಿಸುತ್ತಾ ಹೋಗಬಹುದು. ಈ ಆಧಾರಗಳು ಸತ್ಯವೋ ಅಸತ್ಯವೋ— ಎಂಬ ವಸ್ತುನಿಷ್ಠ ಅಧ್ಯಯನ ಸಾಧ್ಯವಾಗುವುದಿಲ್ಲ ಏಕೆಂದರೆ ರಾಮ-ಮಂದಿರ–ಪರರಿಗೆ ಇನ್ನೊಂದು ಗುಂಪು ಒದಗಿಸಿದ ಆಧಾರದಲ್ಲಿ ನನ್ನ ಗೋಲಿಯಾಟದ 'ಶತ್ರು'ವಿನ ಮಾತಿನಂತೆ ವಿರುದ್ಧಾರ್ಥ ಮಾತ್ರ ಕಾಣುತ್ತದೆ. ರಾಮನ ಪರವಾದ ವಾದಗಳು ಇಸ್ಲಾಮಿಯರಿಗೂ ಹಾಗೆಯೇ ಕಾಣುತ್ತವೆ. ಇದು ಸಹಜ. ಅದಕ್ಕೇ ನನಗೆ ಸಂವಾದ ಬೇಡ ಅನಿಸಿದ್ದು. ಆದರೂ ಈ ಕೆಲ ಅನಿಸಿಕೆಗಳನ್ನು ಓದುಗರ ಮುಂದಿಡುತ್ತೇನೆ

§ ಇತಿಹಾಸಕ್ಕೆ, ಐತಿಹಾಸಿಕ ಸತ್ಯಕ್ಕೆ ನಿಷ್ಠವಾಗುವುದು ಎಂದರೆ ಇತಿಹಾಸದಲ್ಲಿ ನಡೆದ ಅನಾಹುತ ಮತ್ತೆ ಆಗದಂತೆ ನೋಡಿಕೊಳ್ಳುವುದೇ ಆಗಿದೆ. ಹಿಟ್ಲರ್ ಆರ್ಯ ಜನಾಂಗವಾದಿಯಾಗಿ ಯಹೂದಿಯರನ್ನು ಸಮಗ್ರವಾಗಿ ನಿರ್ನಾಮ ಮಾಡಲು ಅತ್ಯಂತ ದಾರುಣ ಕಾರ್ಯಕ್ರಮವನ್ನು ರೂಪಿಸಿದ್ದ. ಹೆಂಗಸರು- ಮಕ್ಕಳು ಎಂದೂ ನೋಡದೆ ಲಕ್ಷಾಂತರ ಜನರನ್ನು ಗ್ಯಾಸ್ ಚೇಂಬರ್‌ನಲ್ಲಿ ಮಾರಣ ಹೋಮ ಮಾಡಿದ. ಈ ಇತಿಹಾಸದ ದೌರ್ಜನ್ಯವನ್ನು ಸರಿಪಡಿಸುವುದೆಂದರೆ ಅವನು ಕೊಂದಷ್ಟೇ ಜನ ನಾಜಿಗಳನ್ನು ಪುನಃ ಗ್ಯಾಸ್ ಚೇಂಬರಿಗೆ ಒಡ್ಡುವುದೆ ? ಇಲ್ಲಿ ನಾವು ಇತಿಹಾಸವನ್ನು ಗೌರವಿಸುವ ದಾದರೆ ಪುನಃ ಜನಾಂಗ ದ್ವೇಷವನ್ನು ಹುಟ್ಟು ಹಾಕಬಾರದು ಅಲ್ಲವೆ ?

§ ಇದುವರೆಗೆ ವಿಶ್ವದಲ್ಲಿ ಯಾವುದೇ ಜನಾಂಗ ಅಥವಾ ಧಾರ್ಮಿಕ ಸಮುದಾಯ ಉಳಿದವರನ್ನು ತುಳಿದು ಆಳುವಲ್ಲಿ ಸಫಲವಾಗಿಲ್ಲ ಸಂಪೂರ್ಣವಾಗಿ ಒಂದು ಧರ್ಮಕ್ಕೆ ಸೇರಿದವರೆಂಬ ಹಣೆಪಟ್ಟಿ ಕಟ್ಟಿಕೊಂಡ ರಾಜ್ಯಗಳೂ ಸಹ ಆಂತರಿಕ ಕಲಹದ ದಳ್ಳುರಿಯಿಂದ ವಿನಾಶದಂಚಿಗೆ ನಡೆದಿವೆ. ಕೆಲವು ಉದಾಹರಣೆಗಳು :

* ಮಧ್ಯಯುಗದ ಯೂರೋಪ್ 'ಕ್ರಿಶ್ಚಿಯನ್‌ಡಂ' ಎನಿಸಿಕೊಂಡು ಇಸ್ಲಾಮಿಯರ ವಿರುದ್ಧ ಹೋರಾಡುತ್ತಾ ("ಕ್ರುಸೇಡ್"ಗಳು) ಅಂಧಕಾರ ಯುಗವನ್ನು ಕಳೆದಿದೆ.
* ಪೂರ್ತಿ ಇಸ್ಲಾಂ ರಾಷ್ಟ್ರಗಳೆನಿಸಿಕೊಂಡ ಇರಾನ್–ಇರಾಕ್ ದೇಶಗಳು ಷಿಯಾ–ಸುನ್ನಿ ಎಂಬ ಕ್ಷುಲ್ಲಕ ಕಾರಣಗಳನ್ನು ಹಿಡಿದುಕೊಂಡು ಒಂಬತ್ತು ಸಂವತ್ಸರಗಳ ಕಾಲ ಯುದ್ಧದಲ್ಲಿಯೇ ನಿರತವಾಗಿ, ಕ್ರೌರ್ಯ–ಅಶಾಂತಿಗಳಿಂದ ವಿಭ್ರಾಂತವಾಗಿ ಹೋಗಿವೆ.
* ಇಸ್ಲಾಂ ರಾಷ್ಟ್ರ ಎಂದು ಕರೆದುಕೊಂಡ ಪಾಕಿಸ್ತಾನ ಕೂಡ ಶಾಂತಿ ಕಂಡಿದೆಯೆ ? ಅಲ್ಲಿ ಪ್ರಜಾಪ್ರಭುತ್ವ ನೆಲೆಗೊಳಿಸಲು ಸಾಧ್ಯವಾಗಿದೆಯೆ ? ಅಲ್ಲಿಯ ಜನರ ಆತಂಕ ಯಾವ ಬಗೆಯದು—ಊಹಿಸಿದರೆ ಚಿಂತೆಯಾಗುತ್ತದೆ.
* ಯಹೂದಿಯರಿಗಾಗಿಯೇ ಕೊಟ್ಟ 'ಇಸ್ರೇಲ್' ನಡೆಸಿದ ಕ್ರೌರ್ಯ ಸಾಮಾನ್ಯವೆ ?

§ ಇದನ್ನೆಲ್ಲ ಗಮನಿಸಿದರೆ, ಕೇವಲ ಮನುಷ್ಯರ ರಾಷ್ಟ್ರವನ್ನೇ ಕಟ್ಟಬೇಕಾದ ಅನಿವಾರ್ಯತೆಯನ್ನು ಅಂಬೇಡ್ಕರ್ ಒತ್ತಿ ಹೇಳಿದ್ದು ಸರಿಯೆನಿಸುವುದಿಲ್ಲವೆ ?

§ ಈ ದೇಶದಲ್ಲಿ ಧರ್ಮದ ಬಗೆಗೆ ಮಾತನಾಡುವುದು, 'ಹಿಂದುಗಳೆಲ್ಲ ಒಂದು' ಎಂಬುದು ನಿಜವಾದ ಆಚರಣೆಯ ಮಟ್ಟದಲ್ಲಿ ಯಾವ ಯಾವ ಬಗೆಯ ಕಳವಳವನ್ನು ಉಂಟು ಮಾಡುತ್ತವೆ ಎಂಬುದು ಕೆ. ಎಂ ಗೋಪಾಲ್, ಶೃಂಗೇರಿ, ಇವರ ಲೇಖನ

ವೇದಿಕೆ

(೩೦-೧೨-೯೦) ಓದಿದವರಿಗೆ ಅರ್ಥವಾಗಬಲ್ಲುದು.

§ ಹಿಂದುಗಳಂತೆಯೇ ಮುಸ್ಲಿಮರನ್ನೂ ಸಮಾನ ಗೌರವದಿಂದ ಕಾಣಬೇಕು; ಅವರು ಇಲ್ಲಿ ಅಸಹಾಯಕರೆಂಬ ಭಾವನೆ ಬಾರದಂತೆ ರಕ್ಷಿಸಬೇಕು ಎಂದ **ಗಾಂಧೀಜಿಯ ಅಭಿಪ್ರಾಯ "ಮುಸ್ಲಿಂ ತುಷ್ಟೀಕರಣ"ವಾಗಿ 'ದೇಶಭಕ್ತ'ರಿಗೆ ಕಾಣಿಸಿ ಗಾಂಧಿಯನ್ನು ಗುಂಡಿಟ್ಟು ಕೊಲ್ಲುವುದು ಸರಿಯೆನಿಸಿಬಿಟ್ಟರೆ....**ಈ ಉಗ್ರ 'ರಾಷ್ಟ್ರ ಪ್ರೇಮ' ನನಗೆ ಅರ್ಥವಾಗುವುದಿಲ್ಲ

§ ಹಾಗಾದಾಗ, ನಾನು-ನನ್ನಂತೆ ಚಿಂತಿಸುವವರು ಈ ದೇಶದ ಮುಸ್ಲಿಮರನ್ನು ಸೋದರರಂತೆ, ಸ್ನೇಹಿತರಂತೆ ಗೌರವದಿಂದ, ಪ್ರೀತಿಯಿಂದ ಕಾಣಬೇಕೆಂಬ 'ನೀತಿ'ಯನ್ನು ಅನುಸರಿಸಿದರೆ 'ದೇಶ ಭಕ್ತರು' ಮೊದಲು ನಮ್ಮನ್ನು ಗುಂಡಿಟ್ಟು ಕೊಲ್ಲುವುದು ಸರಿಯಾದ ಮಾರ್ಗವಾದೀತು ಅಲ್ಲವೆ ?

‡ ಹೀಗೆ 'ತುಷ್ಟೀಕರಣ ನೀತಿ'ಯನ್ನು ಗುಂಡಿಟ್ಟು ಅಡಗಿಸಿದ ಮೇಲೆ 'ದಲಿತರನ್ನು ತುಷ್ಟೀಕರಿಸುವ ನೀತಿ'ಯನ್ನೂ ಸಹ ಗುಂಡಿಟ್ಟು ಅಡಗಿಸಲು ಅವಕಾಶವಿದೆಯಲ್ಲವೆ? ಏಕೆಂದರೆ ಈ 'ತುಷ್ಟೀಕರಣ ನೀತಿ' ಯೂ ಒಳ್ಳೆಯ ಮಾತಿನಲ್ಲಿ ಹೇಳಿದ್ದು ಕೇಳುತ್ತಿಲ್ಲವಲ್ಲ? ಹಾಗೆಂದಾಗ ಶ್ರೀ ಗೋಪಾಲ್ ಅವರ ಆತಂಕದ ಅನಿಸಿಕೆ ಸಹಜವೆನಿಸುವುದಿಲ್ಲವೆ?

ನಾನು ಈ ಸಂವಾದಕ್ಕೆ ಇಳಿಯುವುದಿಲ್ಲ ಎಂದಿದ್ದು 'ಗುಂಡಿ'ಗೆ ಹೆದರಿ ಎಂದು ದಯವಿಟ್ಟು ತಿಳಿಯಬೇಡಿ. ಆದರೆ ಸಂವಾದದಿಂದ ಎರಡು ಗುಂಪಾಗಿ ಕೆರಳುತ್ತಾ ಹೋಗುವುದು ಬೇಡ ಎನ್ನುವುದಕ್ಕಾಗಿ.

—ಕೆ. ಪುಟ್ಟಯ್ಯ, ಶೃಂಗೇರಿ

ಒಬ್ಬ ಯೋಧನ ಅನಿಸಿಕೆ : ನಮ್ಮ ಶ್ರಮಕ್ಕೆ ಪ್ರತಿಫಲ

ಪ್ರಿಯ ಸಂಪಾದಕರೆ,

ಮಂದಿರ–ಮಸೀದಿ ವಿವಾದದ ಬಗ್ಗೆ ನಿಮ್ಮ ಪತ್ರಿಕೆಯ "ವೇದಿಕೆ'ಯ ಸಂವಾದ ಚೆನ್ನಾಗಿ ಬರುತ್ತಿದೆ. ಅದರಲ್ಲೂ ಡಿ. ೧೭ರ ಸಂಚಿಕೆಯಲ್ಲಿ ಬಂದ "ಧರ್ಮದ ಬಗ್ಗೆ ವಿವೇಕಾನಂದರ ದೃಷ್ಟಿ" ಹಾಗೂ "ಭಾರತದಲ್ಲಿ 'ಕೇವಲ ವಾಸಿಸುತ್ತಿರುವವರು' ಯಾರು?" ಮುಂತಾದುವು ಬಹಳ ಅರ್ಥವತ್ತಾಗಿ ವಿಚಾರ ಪ್ರಚೋದಕವಾಗಿವೆ.

ನ ೨೫ರ ಸಂಚಿಕೆಯಲ್ಲಿ 'ಒಬ್ಬ ಹಿಂದೂ' ಬರೆದ "ಶ್ರೀ ರಾಮನೂ ಸಾಮಾಜಿಕ ಸ್ವಾಸ್ಥ್ಯವೂ" ಕೂಡ ಮೆಚ್ಚುಗೆಯಾಯಿತು

ದೇಶದ ಗುರುತರವಾದ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಪ್ರತಿಭಟಿಸದೆ, ಜನಸಾಮಾನ್ಯರ ಬವಣೆಯ ಜೀವನಕ್ಕೆ ಯಾವ ರೀತಿಯಲ್ಲೂ ಸಂಬಂಧವಿಲ್ಲದ ಮಂದಿರ–ಮಸೀದಿ ವಿವಾದದಂತಹ ಕ್ಷುಲ್ಲಕ ಕಾರಣಕ್ಕಾಗಿ ಹೊಡೆದಾಡುತ್ತ, **ದೇಶವನ್ನು ಅಭದ್ರ ಸ್ಥಿತಿಯತ್ತ ಒಯ್ಯುವಲ್ಲಿ ಪ್ರತ್ಯಕ್ಷ-ಪರೋಕ್ಷವಾಗಿ ಕಾರಣರಾಗುವವರೆಲ್ಲ ಇಂತಹ ಲೇಖನಗಳನ್ನು ಓದಿ ತಿದ್ದಿಕೊಂಡರೆ, ನಮ್ಮ ಶ್ರಮಕ್ಕೆ ಅದೇ ತಕ್ಕ ಪ್ರತಿಫಲವಾಗುತ್ತಿತ್ತು.**

ಇದು ಈ ದೇಶವಾಸಿಗಳಿಗೆ ಬೇಗ ಅರ್ಥವಾಗುವುದೆ ?

—ಒಬ್ಬ ಸೈನಿಕ,
ಮೊರ್ಕ್ಯಾಂ : ಮಧ್ಯಪ್ರದೇಶ.

ಸಂವಾದದ 'ವೇದಿಕೆ'ಗೆ ತೆರೆ; ಮುಖ್ಯಾಂಶಗಳ ಸಮೀಕ್ಷೆ

ಪ್ರಿಯ ಓದುಗರೆ,

ಕಳೆದ ನವೆಂಬರ್ ೧೧ರ ಸಂಚಿಕೆಯಿಂದ ಇಲ್ಲಿಯವರೆಗೆ ೧೦ ಸಂಚಿಕೆಗಳಲ್ಲಿ ರಾಮ ಮಂದಿರ–ಬಾಬರಿ ಮಸೀದಿ ವಿವಾದದ ಬಗ್ಗೆ 'ವೇದಿಕೆ' ಅಂಕಣದಲ್ಲಿ ನಡೆದ ಸಂವಾದಕ್ಕೆ ಇನ್ನು ಅಂತಿಮ ತೆರೆ ಎಳೆಯಬಹುದೆನ್ನಿಸುತ್ತದೆ. ಇನ್ನೂ ನಾಲ್ಕಾರು ಪ್ರತಿಕ್ರಿಯೆಗಳು ಬಂದಿವೆ. ಅವುಗಳಲ್ಲಿ ೩ ಬರಹಗಳು ಈಗಾಗಲೇ ಬರೆದವರಿಂದ ಬಂದಂಥವು. ತಮ್ಮ ಬರಹಗಳ ಬಗ್ಗೆ ಬೇರೆಯವರು ಎತ್ತಿದ ಪ್ರಶ್ನೆಗಳಿಗೆ ಉತ್ತರ ಕೊಡಲು ಯತ್ನಿಸಿರುವಂಥವು.

ಆ ಪ್ರಶ್ನೆಗಳು ಎಲ್ಲರೂ ಯೋಚಿಸಲಿಕ್ಕಾಗಿ ಎತ್ತಿದಂಥವು. ಅವಕ್ಕೆ ಪ್ರತ್ಯುತ್ತರ, ಮತ್ತೆ ಅದಕ್ಕೆ ಮಾರುತ್ತರ–ಹೀಗೆ ಮುಂದುವರಿದರೆ ಮತ್ತದು ಅನಂತವೇ. ಆದ್ದರಿಂದ ಅವನ್ನು ಪ್ರಕಟಿಸುವ ಅಗತ್ಯ ಕಾಣುತ್ತಿಲ್ಲ.

ಇನ್ನೆರಡು ಮೂರು ಪತ್ರಗಳಲ್ಲಿ ಬಹುತೇಕ ಈಗಾಗಲೇ ಚರ್ಚಿತವಾದ ವಿಷಯಗಳೇ ಇವೆ. ಅದೇ ಮಾದರಿಯ ಇನ್ನಷ್ಟು ವಿವರಗಳೋ ಅಂಕಿ–ಅಂಶಗಳೋ ತುಂಬಿವೆ.

● ಸಿರಿಮನೆ ನಾಗರಾಜ್.

ಹೊರತು, ಈ ಸಂವಾದದ ಮುಖ್ಯ ಪ್ರಶ್ನೆಯಾದ ಬಾಬರಿ ಮಸೀದಿ ಒಡೆಯಬೇಕೆ–ಬಾರದೆ ಎಂಬ ಜಿಜ್ಞಾಸೆಗೆ ತೀರಾ ಹೊಸ ವಿಷಯ ಸೇರಿಸುವಂಥವಲ್ಲ. ಆದ್ದರಿಂದ ಅವನ್ನು ಕೈ ಬಿಟ್ಟಿದ್ದೇನೆ.

ಒಟ್ಟಿನಲ್ಲಿ, ಈ ಸಂವಾದಕ್ಕೆ ಮುತುವರ್ಜಿಯಿಂದ ಪ್ರತಿಕ್ರಿಯಿಸಿದ ಎಲ್ಲ ಓದುಗರಿಗೂ ಹೃತ್ಪೂರ್ವಕ ಧನ್ಯವಾದಗಳು

ಈಗ, ಈ ಚರ್ಚೆಯನ್ನು ಮುಕ್ತಾಯಗೊಳಿಸುವ ಮೊದಲು ಮುಖ್ಯಾಂಶಗಳನ್ನೊಮ್ಮೆ ಸಮೀಕ್ಷಿಸೋಣ.

* *

ರಾಮ ಮಂದಿರ- ಬಾಬರಿ ಮಸೀದಿ ವಿವಾದದ ಮುಖ್ಯ ಪ್ರಶ್ನೆ ಅಯೋಧ್ಯೆಯಲ್ಲೊಂದು ರಾಮ ಮಂದಿರ ಕಟ್ಟಬೇಕೆ–ಬೇಡವೆ ಎಂಬುದಲ್ಲ; ಅದಕ್ಕಾಗಿ, ಯಾವುದೇ 'ಸಮರ್ಥನೆ'ಯಿದ್ದರೂ ಒಂದು ಮಸೀದಿಯನ್ನು ಒಡೆಯಬಹುದೆ–ಬಾರದೆ ಎಂಬುದೇ ಇಲ್ಲಿನ

(ಮುಂದಿನ ಪುಟಕ್ಕೆ)

ಸಂವಾದದ 'ವೇದಿಕೆ'ಗೆ ತೆರೆ; ಮುಖ್ಯಾಂಶಗಳ ಸಮೀಕ್ಷೆ

(ಹಿಂದಿನ ಪುಟದಿಂದ)

ಮುಖ್ಯ ಮತ್ತು ಏಕೈಕ ಪ್ರಶ್ನೆ. ಆದ್ದರಿಂದ ಸರ್ಕಾರದ್ದಾಗಲಿ, ಇನ್ನಾರದೇ ಆಗಲಿ ರಾಮ ಮಂದಿರ ನಿರ್ಮಾಣಕ್ಕೆ ವಿರೋಧವಲ್ಲ, ವಿರೋಧವಿರುವುದು ಬಾಬರಿ ಮಸೀದಿ ಒಡೆಯುವುದಕ್ಕೆ ಮಾತ್ರ—ಎಂಬುದನ್ನು ಮೊದಲು ಅರಿತುಕೊಳ್ಳೋಣ

ಹೀಗೆಂದಾಗ, ಈ ವಿವಾದದ ಇನ್ನೊಂದು ಮಗ್ಗುಲಿನ ಅರ್ಥ—ಮಸೀದಿ ಒಡೆದೇ ಒಡೆಯಬೇಕು ಎಂಬಷ್ಟಕ್ಕೆ ಛಟ್ಟ ಇಳಿಯುತ್ತದೆ. ಇದನ್ನು ಇಷ್ಟು ಒರಟು ಭಾಷೆಯಲ್ಲಿ ಹೇಳಲಾರದ್ದಕ್ಕೆ, "ಮಸೀದಿಯನ್ನು ಕಳಚಿ, ಸ್ವಲ್ಪ ದೂರದಲ್ಲಿ ಯಥಾವತ್ತಾಗಿ ಪುನಃ ನಿರ್ಮಿಸುವುದು" ಎನ್ನುತ್ತೇವೆ. ಅಷ್ಟೇ ಹೊರತು, ಅರ್ಥ ಒಂದೇ.

ಸಾಮಾನ್ಯ ಪರಿಸ್ಥಿತಿಗಳಲ್ಲಾದರೆ ಇದಕ್ಕೂ ಅಂಥ ವಿರೋಧವೇನೂ ಇರುತ್ತಿರಲಿಲ್ಲ. ಆಂಧ್ರಪ್ರದೇಶದ ಅಣೆಕಟ್ಟೊಂದರಿಂದ ಮುಳುಗಡೆಯಾಗುವ ಪುರಾತನ ದೇವಾಲಯವೊಂದನ್ನು ಹಾಗೇ ಕಳಚಿ ಬೇರೆಡೆ ನಿರ್ಮಿಸುತ್ತಿರುವುದು, ಕೃಷ್ಣಾ ಅಣೆಕಟ್ಟೆಯಿಂದ ಮುಳುಗಡೆಯಾಗುವ ಬಸವಕಲ್ಯಾಣದ ದೇಗುಲದ ಇಂಥದೇ ಮರು ನಿರ್ಮಾಣ—ಇವೆಲ್ಲವೂ ಸಹಜ ಪರಿಸ್ಥಿತಿಗಳಲ್ಲಿ ಯಾವ ಭಾವಾವೇಶಕ್ಕೂ ಆಸ್ಪದವಿಲ್ಲದೆ ನಡೆಯುತ್ತವೆ.

ಆದರೆ ಪ್ರತಿಯೊಂದು ಜೀವಿಯಲ್ಲಿಯೂ ಒಂದೇ ದೈವದ ಪ್ರತಿರೂಪವನ್ನು ಕಾಣುವಂಥ ಉದಾತ್ತ ನಡವಳಿಕೆಯನ್ನು ಬೋಧಿಸಿದ ಈ ಪುರಾತನ ನಾಡಿನಲ್ಲಿ ಆ ನಡವಳಿಕೆ ಬೆಳೆದು ಬಾಳಿ ಬರಲೇ ಇಲ್ಲ. ಪ್ರತಿಯೊಂದು ಜೀವಿಯಿರಲಿ, ಮನುಷ್ಯರಲ್ಲೇ ಇನ್ನಿಲ್ಲದಷ್ಟು ಭೇದ, ತಾರತಮ್ಯ, ಶೋಷಣೆಗಳನ್ನು ಆಚರಿಸಿಕೊಂಡು, ಅದನ್ನೇ ಧರ್ಮಶಾಸ್ತ್ರೋಕ್ತವೆಂದೂ ದೈವ ಕಲ್ಪಿತವೆಂದೂ ಇಂದಿಗೂ ಪ್ರತಿಪಾದಿಸಿಕೊಂಡು ಬರುತ್ತಿರುವ ಈ ದೇಶದಲ್ಲಿ ಯಾವುದು ಸಹಜವಾಗಿ ನಡೆಯಬಲ್ಲುದು ? ಎಲ್ಲದರಲ್ಲೂ ವಿಕೃತಿಯೇ. ವಿಕೃತಿಯ ಮಡಿಲಲ್ಲಿ ವಿಕೃತಿಯಲ್ಲದೆ ಮತ್ತೇನು ಹುಟ್ಟೀತು ? ಇದು ಒಂದು ಚಿತ್ರ. ವಿಷಾದದ ಚಿತ್ರ.

ಆದರೆ ಇದೇ ಪೂರ್ಣ ಚಿತ್ರವಲ್ಲ. ಸಹಜ ಸಂದರ್ಭಗಳಲ್ಲಿ ಎಲ್ಲ ಕೃತಕ ವಿಕೃತಿಗಳನ್ನು ಮೆಟ್ಟಿ, ಮಾನವೀಯ ಸಂಬಂಧಗಳು ದೈವಿಕ ಮಟ್ಟಕ್ಕೇರಿ, ಸುತ್ತೆಲ್ಲ ಪಸರಿಸಿ, ಈ ಅನಾದಿಯ ದೇಶವನ್ನು ಆಯಾ ಕಾಲಕ್ಕೆ ಹೊಂದುವಂತೆ ಸುಂದರವಾಗಿ, ಮಾದರಿಯಾಗಿ ಮಾರ್ಪಡಿಸುತ್ತ, ಇಂದಿಗೂ ಉಳಿಸಿಕೊಂಡು ಬಂದಿವೆ—ಮಾನವೀಯ ಚಿಂತನೆ, ನಡವಳಿಕೆಗಳು.

ಆದ್ದರಿಂದಲೇ, ಕ್ರೂರ ಗಲಭೆಗಳ ಮಧ್ಯೆಯೂ ಎರಡೂ ಗುಂಪುಗಳ ಇಂಥ ಮಾನವೀಯ ವ್ಯಕ್ತಿಗಳು ಪರಸ್ಪರರಿಗೆ ಆಶ್ರಯ ಕೊಡಲು ಸಾಧ್ಯವಾಗಿರುವುದು. ಹಾಗೆಯೇ, ದ್ವೇಷ-ಕ್ರೌರ್ಯದ ಪಶು ಸ್ವಭಾವದವರನ್ನು ಹೊರತು ಪಡಿಸಿ ಉಳಿದೆಲ್ಲರೂ, ಪರಸ್ಪರ ಕಷ್ಟ-ಸುಖಗಳಲ್ಲಿ ಒಂದಾಗಿ ಬಾಳುತ್ತಿರುವುದು

ಆದ್ದರಿಂದಲೇ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಗಾಂಧೀಜಿ, ಕಬೀರ, ಶಿಶುನಾಳ ಶರೀಫ, ಮದರ್ ಥೆರೆಸಾ ಇತ್ಯಾದಿ ಅಸಂಖ್ಯಾತರು ಪರಸ್ಪರರ ಒಳಿತನ್ನು ಎತ್ತಿ ಕೊಂಡಾಡಿ ಹಾಗೇ ಬದುಕಿ ತೋರಿಸಲು ಸಾಧ್ಯವಾಗಿರುವುದು.

ಆದರೂ, ವಸ್ತುಸ್ಥಿತಿಯ ಕರಾಳತೆ ಅಷ್ಟು ಸುಲಭವಾಗಿ ಕರಗುವುದಿಲ್ಲವಲ್ಲ ಹೀಗೊಂದು ವಿವಾದವಿದೆಯೆಂಬ ಅರಿವೇ ಇಲ್ಲದೆ ಈ ದೇಶದಲ್ಲೇ ಅಕಸ್ಮಾತ್ತಾಗಿ ಒಂದು ಜನ ಸಮುದಾಯದಲ್ಲಿ ಹುಟ್ಟಿ ಬಂದ ಕೆಲವು ಕೋಟಿ ಜನರನ್ನು, ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಯಾವುದೋ ರೀತಿಯ ದ್ರೋಹಿಗಳು, ಯಾವುದೋ ರೀತಿಯ ಕ್ರೌರ್ಯದ ವಾರಸುದಾರರು ಎಂದು ಚಿತ್ರಿಸುತ್ತ, ಅದರ 'ಸಿಹಿ' ಫಲವನ್ನು ಗೌಪ್ಯವಾಗಿ ಯಾರೋ ಅನುಭವಿಸುತ್ತ ಬಂದುದರ ಇವತ್ತಿನ ರೂಪವೇ ಆ ಒಂದು ಜನ ಸಮುದಾಯದಲ್ಲಿ ಮೂಡಿರುವ ಅಭದ್ರತೆಯ, ಆತಂಕದ ಭಾವನೆಗೆ ಕಾರಣ.

ಅದಲ್ಲವಾದರೆ ದಂಡೆತ್ತಿ ಹೋಗುವುದು, ದಾಳಿ ಮಾಡುವುದು, ದೇವಳಗಳ ಧ್ವಂಸ ಮತ್ತು ಲೂಟಿ ಮಾಡುವುದು, ಮತಾಂತರ ಮಾಡುವುದು—ಇವೆಲ್ಲ ಕೇವಲ ಬಾಬರ್, ಘಸ್ನಿ, ಘೋರಿ ಮುಂತಾದವರಿಗೆ ಮಾತ್ರ ಗುತ್ತಿಗೆಯೆ? ಅಥವಾ ಅಂಥದು ಈ ದೇಶದ ಮೇಲೆ ಮಾತ್ರ ನಡೆದಿದೆಯೆ? ಇಲ್ಲ ತಾನೆ?

ಮಾನವ ಸಮಾಜ ಬೆಳೆಯುತ್ತ ರಾಜಾಳ್ವಿಕೆಯ ಪದ್ಧತಿ ಬೆಳೆದಂತೆ, ದಂಡು-ದಾಳಿ-ಆಕ್ರಮಣ-ಲೂಟಿ-ಮತಾಂತರಗಳೂ ಅದರ ಜೊತೆ ಜೊತೆಗೇ ಬೆಳೆದು ಬಂದಿವೆ. ಒಬ್ಬ ರಾಜ ಪಟ್ಟಕ್ಕೆ ಬಂದೊಡನೆ ರಾಜ್ಯ ವಿಸ್ತರಣೆಯ ಈ ಸರಪಳಿಯೂ ಸಾಂಗವಾಗಿ ನಡೆಯುತ್ತಿತ್ತು. ಅದು ಹೊರದೇಶಗಳಲ್ಲೂ ನಡೆದಿದೆ, ಭಾರತದೊಳಗೂ ನಡೆದಿದೆ. ವಿದೇಶೀಯ, ವಿಧರ್ಮೀಯ ರಾಜರು ಭಾರತದ ಮೇಲೆ ಮಾತ್ರವಲ್ಲ, ತಮ್ಮದೇ ಧರ್ಮಗಳುಳ್ಳ ರಾಜ್ಯಗಳ ಮೇಲೂ ದಾಳಿ ಮಾಡಿದ್ದಾರೆ. ಭಾರತದ ಪೌರಾಣಿಕ 'ಇತಿಹಾಸ'ಗಳನ್ನು ನಂಬುವುದಾದರೆ ಇಲ್ಲಿನ ರಾಜರುಗಳು ಸಹ ಅಶ್ವಮೇಧ ಯಾಗ ಮುಂತಾದ ಕಾರಣಗಳಿಂದ "ಇಡೀ ಪ್ರಪಂಚ"ವನ್ನೇನು, ಮೂರು ಲೋಕಗಳನ್ನೂ ಜಯಿಸಿದ ವೃತ್ತಾಂತಗಳಿವೆ.

ಇಂಥ ಯುದ್ಧಗಳಲ್ಲಿ ತಪ್ಪದೇ ದಾಳಿಗೆ ಗುರಿಯಾಗುತ್ತಿದ್ದವುಗಳಲ್ಲಿ ಪೂಜಾ ಸ್ಥಳಗಳಿಗೆ ಮೊದಲ ಸ್ಥಾನವೆನ್ನಬೇಕು. ಏಕೆಂದರೆ ಅಲ್ಲಿ ಅಪಾರ ಸಂಪತ್ತನ್ನು ಅಡಗಿಸಿ ಅಥವಾ ಶೇಖರಿಸಿ ಇಡಲಾಗುತ್ತಿತ್ತು. ಬೇಕೆಂದೇ ಇನ್ನೊಂದು ಧರ್ಮ ಅಥವಾ ಇನ್ನೊಂದು ಪಂಥದ ದೇವಾಲಯಗಳನ್ನು ನಾಶ ಮಾಡಿದ್ದೂ ಇಲ್ಲದಿಲ್ಲ. ನಮ್ಮ ದೇಶದೊಳಗೇ ಹಿಂದೂ ರಾಜರುಗಳಲ್ಲೇ ಶೈವರು, ವೈಷ್ಣವರು ಮುಂತಾದ ವಿಭಿನ್ನ ಪಂಥದವರು ತಾವು ಗೆದ್ದ ರಾಜ್ಯದ ದೇವಾಲಯಗಳನ್ನು ಕೆಡವಿಯೋ, ಮಾರ್ಪಡಿಸಿಯೋ ತಮ್ಮ ಪಂಥದ ದೇವಾಲಯವನ್ನಲ್ಲಿ ಸ್ಥಾಪಿಸಿದ್ದಕ್ಕೂ ಅಸಂಖ್ಯ ಉದಾಹರಣೆಗಳಿವೆ.

ಅಂತೆಯೇ ಆಯಾ ಧರ್ಮದ ರಾಜರೊಳಗೇ ಯುದ್ಧಗಳೂ, ವಿಧರ್ಮೀಯ ರಾಜರುಗಳು ಪರಸ್ಪರ ಬೆಂಬಲವಾಗುತ್ತಿದ್ದುದೂ ಅನೇಕ. ಅಕ್ಬರ್-ಚಾಂದ್ ಬೀಬಿ, ಮೊಘಲ್-ಬಹುಮನಿ ಮುಂತಾಗಿ ಮುಸ್ಲಿಮ್ ರಾಜ್ಯಗಳೊಳಗೇ ಯುದ್ಧಗಳಾಗಿವೆ. ಅಬ್ಬಕ್ಕ ರಾಣಿಯ ಗಂಡನೇ ಆಕೆಯನ್ನು ಪೋರ್ಚುಗೀಸರಿಗೆ ಹಿಡಿದೊಪ್ಪಿಸಲು ಪಿತೂರಿ ನಡೆಸಿದರೆ, ಮಾಪಿಳ್ಳೆಗಳು ಅವಳೊಂದಿಗೆ ನಿಂತು ಪೋರ್ಚುಗೀಸರ ವಿರುದ್ಧ ಯುದ್ಧ ಮಾಡಿದರು. ಶಿವಾಜಿಯ ಮಕ್ಕಳೋ ಮರಿಮಕ್ಕಳೋ ಶೃಂಗೇರಿ ಮಠವನ್ನು ಹಾಳುಗೆಡವಿದರೆ, ಮುಸಲ್ಮಾನ ಟಿಪ್ಪು ಸಂಪೂರ್ಣ ರಕ್ಷಣೆ, ಉಂಬಳಿ, ಎಲ್ಲ ನೀಡಿ, ಮಠದ ಭಕ್ತನಾಗಿ, ಅಭಿಮಾನಿಯಾಗಿ ನಡೆದುಕೊಂಡ. ಅದೇ ಟಿಪ್ಪು ತನಗೆ ದ್ರೋಹ ಬಗೆದರೆಂದು ಕೊಡವರನ್ನು ಕ್ರೂರವಾಗಿ ಮತಾಂತರಿಸಿದರೂ, ಶ್ರೀರಂಗಪಟ್ಟಣದಲ್ಲಾಗಲಿ, ಇಡೀ ತನ್ನ ಮೈಸೂರು ರಾಜ್ಯದಲ್ಲಾಗಲಿ ಹಾಗೆ ಮಾಡಲಿಲ್ಲ. ಅಲ್ಲೆಲ್ಲ ಕೆಲಸ ಮಾಡಿದ್ದು ಸ್ವಾರ್ಥ ಮತ್ತು ಮನುಷ್ಯತ್ವಗಳೇ ಹೊರತು ಧರ್ಮಗಳಲ್ಲ.

ಹೀಗೆ ಚರಿತ್ರೆಯ ಆ ಕಾಲ ಘಟ್ಟದಲ್ಲಿ ದಾಳಿ, ಮತಾಂತರ, ಪೂಜಾ ಸ್ಥಳ ನಾಶ ಇವುಗಳಿಗೂ ರಾಜರ ವಿಸ್ತರಣಾಕಾಂಕ್ಷೆಗೂ ಸಂಬಂಧವೇ ಹೊರತು, ಇವೆಲ್ಲ ಬಾಬರ್, ಘಸ್ನಿ, ಘೋರಿ (ಮತ್ತು ಕೊಡಗಿನಲ್ಲಿ ಟಿಪ್ಪು) ಮುಂತಾದವರಿಗೆ ಮಾತ್ರ ಪ್ರತ್ಯೇಕವಾದ ನಡಾವಳಿಯಲ್ಲ. ಪ್ರತಿಯೊಬ್ಬ ಮಹತ್ವಾಕಾಂಕ್ಷಿ ರಾಜನಲ್ಲೂ ಇದಕ್ಕೆ ಉದಾಹರಣೆಯಿದೆ; ಪ್ರತಿಯೊಂದು ದೇಶದಲ್ಲೂ ಇದೆ. "ಭಾರತದ ಮೇಲೆ ಪರಕೀಯರ ದಾಳಿಯ ಉದ್ದೇಶ ಅನ್ಯ ಮತದ ನಾಶ" ಎಂಬುದು ದುರುದ್ದೇಶದ ಸುಳ್ಳು ಬೋಧನೆ ಮಾತ್ರ (ಕೇವಲ 'ತಪ್ಪು ತಿಳುವಳಿಕೆ' ಕೂಡ ಅಲ್ಲ.)

ಇರಲಿ. ಭಾರತದ ಮುಸ್ಲಿಮರಿಗೂ ಹಿಂದುಗಳಿಗೂ ಅವರು ಪೂಜಿಸುವ ದೇವರ ಹೆಸರು ಮತ್ತು ನಂಬಿರುವ ಧರ್ಮದ ಹೆಸರುಗಳಲ್ಲಿ ಹೊರತು ಇನ್ನಾವ ರೀತಿಯಲ್ಲಿ ವ್ಯತ್ಯಾಸವಿದೆ? ಹೀಗಿರುವಾಗ ಮುಸ್ಲಿಮರು ಮಾತ್ರ 'ದೇಶದ್ರೋಹಿಗಳು', 'ಇಲ್ಲಿ ಕೇವಲ ವಾಸಿಸುತ್ತಿರುವವರು' ಹೇಗಾಗುತ್ತಾರೆ ? (ಈ ಗುಣವಾಚಕ ಶಬ್ದ ಬಳಸುವವರು ಅವರನ್ನು ಕುರಿತೇ ಬಳಸಿರುವುದು, ಬಳಸುತ್ತಿರುವುದು. ಕುಮಾರ ನಾರಾಯಣನ್‌ಗಳನ್ನು ಕುರಿತೂ ಅಲ್ಲ, 'ಬೋಫೋರ್ಸ್'ಗಳನ್ನು ಕುರಿತೂ ಅಲ್ಲ; 'ಗೋಡ್ಸೆ'ಗಳನ್ನು ಕುರಿತಂತೂ ಹೇಗೂ ಅಲ್ಲವಷ್ಟೆ? "ಅವರೆಲ್ಲರನ್ನೂ ಕುರಿತು" ಎಂಬ ಸಮಜಾಯಿಷಿ ವ್ಯರ್ಥ).

ಸುಮಾರು ೧೯೧೫-೨೦ರವರೆಗೂ ಈ ದೇಶದಿಂದ ತಾವೊಂದು ಬೇರೆ ಎಂಬಂತಾಗಲಿ, ಈ ದೇಶದವರು ನಡೆದುಕೊಳ್ಳದ ಇನ್ನಾವುದೇ ವಿಶೇಷ ರೀತಿಯಲ್ಲಾಗಲಿ ವರ್ತಿಸದೆ (ಆಚಾರ, ನಂಬಿಕೆ, ಆಹಾರ, ಉಡುವು ಇತ್ಯಾದಿ ಹೊರತು) ಪೂರ್ತಿ ಭಾರತೀಯರಾಗಿಯೇ ಇದ್ದ ಮುಸ್ಲಿಮರನ್ನು ತೀವ್ರ ಪ್ರತ್ಯೇಕತಾ ದೃಷ್ಟಿಯಿಂದ ನಡೆಸಿಕೊಂಡದ್ದು ಕೂಡ ಅವರ "ಪರವಾಗಿ" ಕೆಲ ನಾಯಕರು ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮುಂದಿಡಲು ಕಾರಣವಾಗಿದೆ

(ಮುಂದಿನ ಪುಟಕ್ಕೆ)

ಕಳೆದ ವಾರದ 'ಚಿನ್ನಂ ಬಂಟ'ದ ಅಪೂರ್ಣ ಕತೆಯ ಉಳಿದ ಭಾಗ ಮುಂದಿನ ವಾರ.

—ಸಂ.

ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಭಾರತೀಯ ಸೇನಾ ಪಡೆಯ ಯೋಧನೊಬ್ಬನ ಅನಿಸಿಕೆಯನ್ನು ಓದುಗರೆಲ್ಲ ನಿರ್ಮಲ ಮನಸ್ಸಿನಿಂದ ವಿಚಾರ ಮಾಡುತ್ತೀರೆಂದು ಆಶಿಸುತ್ತೇನೆ. ಈತ ದೇಶಾದ್ಯಂತ ನಡೆದ, ಯಾವ ಅರ್ಥವೂ ಪುರುಷಾರ್ಥವೂ ಇಲ್ಲದ ಕ್ಷುಲ್ಲಕ ಗಲಭೆಗಳಲ್ಲಿ, ತನ್ನಂತೆಯೇ, ರಕ್ತ-ಮಾಂಸಗಳಿಂದ ಮಾಡಲ್ಪಟ್ಟ ಸಹಮಾನವರು—ಅವರು ಹಿಂದುಗಳೊ, ಮುಸ್ಲಿಮರೋ ಅಂತೂ ಕನಿಷ್ಠ ಪಕ್ಷ ಮಾನವರು—ಪರಸ್ಪರರ ಕತ್ತಿ-ಚೂರಿಗಳಿಂದಲೋ, ರಕ್ಷಣಾ ಪಡೆಗಳ ಗುಂಡೇಟಿನಿಂದಲೋ ಕ್ಷಣಾರ್ಧದಲ್ಲಿ ಹೆಣವಾಗುತ್ತಿದ್ದಂಥ, ನಾಗರಿಕ ಮಾನವನ ವಿಲಕ್ಷಣ ಸ್ಥಿತಿಯನ್ನು ಖುದ್ದು ಕಂಡವನಿರಲೂಬಹುದು.

ಮನುಷ್ಯಮಾತ್ರದವರಿರಲಿ, ಸಾಮಾನ್ಯ ರೀತಿಯ ಯಾವುದೇ ಜೀವಿ-ಜಂತುಗಳೂ ಬದುಕಿರಲು ಸಾಧ್ಯವಿಲ್ಲದಂಥ ಲೇಹ್-ಲಡಾಖ್‌ಗಳಂಥ ತಾಣಗಳಲ್ಲಿ, ಈತನಂಥ ಲಕ್ಷಾಂತರ ಮಂದಿ ತಾಯಿ ಭಾರತಿಯ ವೀರ ಮಕ್ಕಳು ದೇಶ ರಕ್ಷಣೆಗೆಂದು ಯುದ್ಧವಿಲ್ಲದೆಯೂ ಪ್ರಾಣ ಕೊಡುತ್ತಿರುವುದು ನಮಗೆಲ್ಲ ಗೊತ್ತಿರುವಂಥದೇ.

(ಅಲ್ಲಿನ ಮಹಾ ಪ್ರತಿಕೂಲ ಹವಾಮಾನದಿಂದಾಗಿ, ಅಲ್ಲಿ ನಿಯೋಜಿಸಲ್ಪಡುವ ಪ್ರತಿ ಮೂರರಲ್ಲೊಬ್ಬ ಅಲ್ಲೇ ಮಣ್ಣಾಗುತ್ತಾನೆ, ಗೊತ್ತೆ?) ಯುದ್ಧ ಯಾರಿಗೆ ಬೇಕಿದೆಯೋ? ಅದು ಯಾರ ಅಧಿಕಾರವನ್ನೂ, ಹಿತಾಸಕ್ತಿಯನ್ನೂ ಗಟ್ಟಿಗೊಳಿಸುವುದೋ ತಿಳಿಯದು. ಆದರೆ ಇವರಿಗದು 'ದೇಶ ರಕ್ಷಣೆ'ಯ ಹೊಣೆಗಾರಿಕೆ. ಬೋಫೋರ್ಸ್‌ನಂಥ ಲಂಚದ ಶಸ್ತ್ರ ಹಿಡಿದು ಆ ಹೊಣೆಗಾರಿಕೆಯ 'ಋಣ' ತೊಡಬೇಕಾಗಿರುವ ಈತನಿಗೆ, "ಇಲ್ಲಿ ಕೇವಲ ವಾಸಿಸುತ್ತಿರುವವರು ಯಾರು?" ಎಂಬ ಪ್ರಶ್ನೆ ತುಂಬಾ ಅರ್ಥಪೂರ್ಣವೆನ್ನಿಸಿದ್ದರೆ ಆಶ್ಚರ್ಯವಿಲ್ಲ.

ಅಂಥ ದುರ್ಭರ ಸ್ಥಿತಿಯಲ್ಲೂ, ಲವಲವಿಕೆಯಿಂದ, ನಗುಮೊಗದಿಂದ ಸೇವೆಸ್ಯೆಯಬೇಕಾದ ಈತ ಅದಕ್ಕೆ ಪ್ರತಿಫಲವಾಗಿ ನಮ್ಮಿಂದ ತನಗಾಗಿ ಏನನ್ನೂ ಕೇಳುತ್ತಿಲ್ಲ; ಕೇವಲ ನಮ್ಮ ನಮ್ಮೊಳಗೆ ಸಾಮರಸ್ಯ, ವಿವೇಕ, ಸೋದರತೆಗಳನ್ನೇ ತನಗೆ ಪ್ರತಿಫಲವೆಂದು ಕೇಳುತ್ತಾನೆ

ಅಷ್ಟನ್ನೂ ಕೊಡಲಾಗದ ನಾವು ಇನ್ನಾತಕ್ಕೆ ಲಾಯಕ್ಕು?

ಬಸರಿಕಟ್ಟೆಗೆ ಪ್ರತಿದಿನ ಅಂಚೆ ಬಸ್ ಬೇಕು

ಕೊಪ್ಪ : ಶಂಕರ್ ಸಾರಿಗೆ ಮುಷ್ಕರದಿಂದಾಗಿ ಈ ತಾಲ್ಲೂಕಿನ ಮೂಲೆಯಲ್ಲಾದ ಬಸರಿಕಟ್ಟೆಗೆ ಈಗ ದಿನವಹಿ ಬಸ್ ಸಂಚಾರ ಬಹಳ ಅನಿಶ್ಚಿತವಾಗಿದ್ದು, ದಿನಕ್ಕೆ ಒಂದು ಅಥವಾ ಎರಡು ಬಸ್‌ಗಳು ಮಾತ್ರ ಬರುತ್ತಿವೆ. ಇವು ಟಪಾಲು ತರುವುದಿಲ್ಲವಾದ್ದರಿಂದ ಕೊಪ್ಪದಿಂದ ಕಡೇಪಕ್ಷ ಬೆಳಿಗ್ಗೆ ೭ ಮತ್ತು ಸಂಜೆ ೪ ಗಂಟೆಗೆ ಬಸ್‌ಗಳನ್ನು ಬಿಟ್ಟು, ಅವು ಜಯಪುರ ಅಂಚೆ ಕಛೇರಿಯಿಂದ ಟಪಾಲು ತರುವಂತೆ ವ್ಯವಸ್ಥೆ ಮಾಡಬೇಕೆಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಬಾಳಗಡಿ ಗ್ರಂಥಾಲಯದ ಕೆಲಸದ ದಿನ, ವೇಳೆ

ಕೊಪ್ಪ : ಇಲ್ಲಿನ ಬಾಳಗಡಿಯ ವಿದ್ಯಾ ಮಹಿಳಾ ಸಮಾಜದ ಆಶ್ರಯದಲ್ಲಿ ಈಚೆಗೆ ಆರಂಭವಾಗಿರುವ ಸಾರ್ವಜನಿಕ ಗ್ರಂಥಾಲಯವು ಭಾನುವಾರ ರಜಾದಿನ ಹೊರತುಪಡಿಸಿ ಪ್ರತಿದಿನ ಸಂಜೆ ೪ ಗಂಟೆಯಿಂದ ೬.೩೦ ಗಂಟೆಯವರೆಗೆ ತೆರೆದಿರುತ್ತದೆ.

ಭರತ ನಾಟ್ಯ ತರಗತಿಗಳು ಶನಿವಾರ ಸಂಜೆ ೪.೩೦ ರಿಂದ ೬ ಗಂಟೆಯವರೆಗೂ, ಭಾನುವಾರ ಮಧ್ಯಾಹ್ನ ೧೧ ರಿಂದ ೧ ಗಂಟೆಯವರೆಗೂ ನಡೆಯುತ್ತವೆ

ಓದುಗರ ಪತ್ರ

ಅಕ್ರಮ ಸಾರಾಯಿ ಅಂಗಡಿ ವಿರೋಧಿಸಿ ಮಂ| ಸದಸ್ಯನ ರಾಜೀನಾಮೆ: ಒಂದು ಸ್ಪಷ್ಟನೆ

ಪ್ರಿಯರೆ,

ಅಕ್ರಮ ಸಾರಾಯಿ ಅಂಗಡಿಯ ತೆರವಿನ ವಿವಾದದಲ್ಲಿ ನಾನು ವಿದ್ಯಾರಣ್ಯಪುರ ಮಂಡಲ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಕ್ಕೆ ಕಾರಣ, ಈ ಬಗೆಗಿನ ಕಾನೂನಿನ ಅನ್ವಯದಲ್ಲಿ ಲೋಪವೆಂದಾಗಲಿ; ಮಂಡಲ ಪಂಚಾಯ್ತಿಯ ಅಸಾಮರ್ಥ್ಯವೆಂದಾಗಲಿ ಅಲ್ಲ.

ಈ ಸಮಸ್ಯೆಯನ್ನು ಸ್ಥಳೀಯವಾಗಿ ಬಗೆಹರಿಸಲೋಸುಗ, ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಶೃಂಗೇರಿ ತಹಸೀಲ್ದಾರರನ್ನು ಕೋರಿ ಅರ್ಜಿಯೊಂದನ್ನು ಗ್ರಾಮಸ್ಥರೆಲ್ಲರ ಅನುಮೋದನೆಯಿಂದಲೇ ಬರೆದು ಸಹಿ ಹಾಕಿಸಿ ಸಲ್ಲಿಸಿದೆ. ಆದರೆ ಇದನ್ನು ವಿರೋಧಿಸಿದ ಕೆಲವರು ಸಾರಾಯಿ ಅಂಗಡಿಯ ಪರವಾಗಿ ಅರ್ಜಿ ಬರೆದು ಅದಕ್ಕೆ ಕೆಲ ಗ್ರಾಮಸ್ಥರನ್ನು ಬೆದರಿಸಿ, ಇನ್ನು ಕೆಲವರನ್ನು ಮುಲಾಜಿನಿಂದ ಸಿಕ್ಕಿಸಿ ಸಹಿ ಮಾಡಿಸಿದರು.

ಗ್ರಾಮಸ್ಥರ ಈ ದ್ವಂದ್ವ ನಿಲುವನ್ನು ಪ್ರತಿಭಟಿಸಿ ಹಾಗೂ ನನ್ನಿಂದಾಗಿ ಊರಿನಲ್ಲಿ ೩ ಗುಂಪಾಗಿ ಒಗ್ಗಟ್ಟು ಹಾಳಾಗಬಾರದೆಂದು ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇನೆ.

ಈ ಬಗ್ಗೆ ಮತದಾರರಲ್ಲಿ ಸಮಾಲೋಚಿಸದೆ ಏಕಪಕ್ಷೀಯವಾಗಿ ನಿರ್ಣಯ ಕೈಗೊಂಡುದಕ್ಕೆ ಎಲ್ಲರಲ್ಲಿ ಕ್ಷಮೆ ಯಾಚಿಸುತ್ತೇನೆ. —ಬಿ. ಎ ಧರ್ಮಪ್ಪ,

ಬೇಗಾನೆ, ಶೃಂಗೇರಿ ತಾ||

ಭೂಬ್ಯಾಂಕ್‌ನ ನಿರ್ದೇಶಕರ ಸ್ಥಾನಕ್ಕೆ ಸಂಚಕಾರ

ಕೊಪ್ಪ : ಇಲ್ಲಿನ ಪ್ರಾಥಮಿಕ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರಾಗಿದ್ದ ಕೆಸುವಿನಮನೆಯ ಅಪ್ಪಿ, ಹೆಗ್ಗಾರಿನ ಶ್ರೀಮತಿ ತಿಮ್ಮಮ್ಮ, ಕೋಣೆಗದ್ದೆ ಪದ್ಮನಾಭ ಮತ್ತು ಕುಸುರಿಗೆ ಕೃಷ್ಣಪ್ಪ ಇವರುಗಳ ನಿರ್ದೇಶಕತ್ವ ಸಾಲದ ಸುಸ್ತಿಯ ಕಾರಣ ರದ್ದಾಗಿದೆ. ಅವರುಗಳು ಇನ್ನು ಒಂದು ವರ್ಷ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸುವಂತಿಲ್ಲ. ಇವರಲ್ಲಿ ಕೃಷ್ಣಪ್ಪ, ಪದ್ಮನಾಭ ಈ ಹಿಂದೆ ಅಧ್ಯಕ್ಷರಾಗಿದ್ದರು. ಅಪ್ಪಿ ಹಾಲಿ ಉಪಾಧ್ಯಕ್ಷರು.

ಕೃಷ್ಣಪ್ಪ ಅವರು, ಅಂತಿಮ ತಗಾದೆಗೆ ಹಣ ಕಟ್ಟಿರುವುದರಿಂದ ಈ ಆದೇಶದ ವಿರುದ್ಧ ಹೈ. ಕೋರ್ಟಿಗೆ ಹೋಗಿರುವುದಾಗಿ ತಿಳಿದು ಬಂದಿದೆ ಈ ಎಲ್ಲರ ಅಧಿಕಾರಾವಧಿ ಇದೇ ಏಪ್ರಿಲ್‌ಗೆ ಮುಗಿಯುವುದಿತ್ತು.

ವಾಲಿಬಾಲ್ ಪಂದ್ಯಾವಳಿ

ಹರಿಹರಪುರ : ಇಲ್ಲಿನ ಸ್ನೇಹ ಸಂಗಮ ಕ್ರೀಡಾ ಸಂಘದ ಆಶ್ರಯದಲ್ಲಿ ಜನವರಿ ೨೬ ಮತ್ತು ೨೭ ರಂದು ಯುವಕ-ಯುವತಿಯರಿಗಾಗಿ ಆಹ್ವಾನಿತ ವಾಲಿಬಾಲ್ ಟೂರ್ನಮೆಂಟ್ ನಡೆಯಲಿದೆ. ಪ್ರವೇಶ ಧನ ರೂ. ೨೫ ಆಗಿದ್ದು, ಆಸಕ್ತ ತಂಡಗಳು ತಮ್ಮ ಪ್ರವೇಶಗಳನ್ನು ಜ. ೨೪ ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಕಳಿಸಬಹುದು.

ಎಸ್ ಕೆ. ಜಗದೀಶ್, ೨ನೇ ಪಿ. ಯು. ಸಿ. ಅ. ರಾ. ಸ. ಪದವಿ ಪೂರ್ವ ಕಾಲೇಜು, ಹರಿಹರಪುರ-೫೭೭೧೨೦.

ತಾ|| ೨೭ರ ಸಂಜೆ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. (ಅನಿಲ).

ನಿಧನ

ಜಯಪುರ : ಮೇಗುಂದಾ ಹೋಬಳಿಯ ನಾಲ್ಕು ಗ್ರಾಮಗಳಲ್ಲಿ ಪುರೋಹಿತರಾಗಿ ಜನಪ್ರಿಯರಾಗಿದ್ದ ಬಲೆಗೋಡು ಶೇಷಭಟ್ಟರು ಈಚೆಗೆ (ಡಿ. ೨೧) ನಿಧನರಾದರು. ವೇದಾಧ್ಯಯನ ಸಂಪನ್ನರಾಗಿದ್ದ ಅವರನ್ನು ಕೊಪ್ಪ ತಾ| ಬ್ರಾಹ್ಮಣ ಮಹಾಸಭೆ 'ವೇದಜ್ಞ', 'ಪ್ರಯೋಗಜ್ಞ', 'ಸಾತ್ವಿಕ' ಮುಂತಾಗಿ ಸನ್ಮಾನಿಸಿತ್ತು.

(ವರದಿ : ಎಚ್. ಎಂ. ಗಿರೀಶ್.)

ಕನ್ನಡ ಅಂಕಿಗಳನ್ನೇ ಬಳಸಿ

೦ ೧ ೨ ೩ ೪ ೫ ೬ ೭ ೮ ೯

ಸಂವಾದದ 'ವೇದಿಕೆ'ಗೆ ತೆರೆ; ಮುಖ್ಯಾಂಶಗಳ ಸಮೀಕ್ಷೆ

(ಹಿಂದಿನ ಪುಟದಿಂದ)

(ಇಂದು ಪಂಜಾಬ್, ಅಸ್ಸಾಂ, ನಾಗಾಲ್ಯಾಂಡ್, ಮುಂತಾದೆಡೆಯ ಪ್ರತ್ಯೇಕತಾ ಬೇಡಿಕೆಗಳಿಗೂ ಕೂಡ ನಮ್ಮ ತಪ್ಪುಗಳೇ ಮೊದಲ ಕಾರಣವಾಗಿರುವಂತೆ. ವಿದೇಶಿ ಶಕ್ತಿಗಳೇನಾದರೂ ಅದನ್ನು ದುರುಪಯೋಗಪಡಿಸಿಕೊಳ್ಳುವುದಿದ್ದರೆ ಅದು ನಂತರವಷ್ಟೇ. ಸಮಸ್ಯೆಯ ಪ್ರಾರಂಭ ನಮ್ಮಿಂದಲೇ)

ಇಂದಿಗೂ **ಬಹುತೇಕ ಭಾರತೀಯ ಮುಸ್ಲಿಮರಿಗೆ** ಪಾಕಿಸ್ತಾನದ ಬಗೆಗಿರುವ ಭಾವನೆ 'ತಮ್ಮ ಜಾತಿ' ಪ್ರೇಮದಿಂದ ಹೊಮ್ಮಿದಂಥದೇ ಹೊರತು, ನಾವು ಪ್ರಚಾರ ಮಾಡುತ್ತಿರುವಂಥ ಇತರ ಬಗೆಯ ಒಲವು ಖಂಡಿತ ಅಲ್ಲ ಎಂಬುದಕ್ಕೆ ಎಷ್ಟು ಬೇಕಾದರೂ ದೃಷ್ಟಾಂತ ಕೊಡಬಹುದು.

ಪಾಕಿಸ್ತಾನ ಆಟದಲ್ಲಿ ಗೆದ್ದರೆ ಪಟಾಕಿ ಸಿಡಿಸುವುದೋ, 'ಪಾಕಿಸ್ತಾನ್ ಜಿಂದಾಬಾದ್', ಘೋಷಿಸುವುದೋ—ಇಂಥ ಕೃತ್ಯಗಳು ಅವರಲ್ಲೂ ಇರುವ ಕೆಲವು ಹುಂಬರು, ದುಷ್ಟರ ನಡವಳಿಕೆ ಮಾತ್ರ. ಅದಕ್ಕಾಗಿ ಇಡೀ ಸಮುದಾಯವನ್ನೇ ದೂಷಿಸುವುದು, ಪಾಕಿಸ್ತಾನ, ಬಾಂಗ್ಲಾ ದೇಶ ಅಥವಾ ಕಾಶ್ಮೀರಿ ಉಗ್ರಗಾಮಿಗಳು ಮಾಡಿರಬಹುದಾದ ತಪ್ಪನ್ನೇ ನಾವೂ ಮಾಡಬೇಕೆನ್ನುವುದು ನಮ್ಮ ವಿವೇಕಕ್ಕೆ ಬಿಟ್ಟ ವಿಚಾರ

ಇದೇ ರೀತಿ, ಅವರು ಎಷ್ಟು ಬೇಕಾದರೂ ಮದುವೆ ಮಾಡಿಕೊಳ್ಳುತ್ತಾರೆ, ಎಷ್ಟು ಬೇಕಾದರೂ ಮಕ್ಕಳನ್ನು ಪಡೆದು ಭಾರತವನ್ನೇ ತಮ್ಮದನ್ನಾಗಿ (ಪಾಕಿಸ್ತಾನವನ್ನಾಗಿ ?) ಮಾಡಿಕೊಳ್ಳುತ್ತಾರೆ—ಇವೇ ಮುಂತಾದ ಪ್ರಚಾರಗಳು, ಕಲ್ಪನೆಗಳು ಸರಿಯೋ ತಪ್ಪೋ ಎಂಬುದನ್ನು, ಕೊಪ್ಪ, ಶೃಂಗೇರಿ—ಇಂಥ ಯಾವುದೇ ಒಂದು ಊರನ್ನು ಉದಾಹರಣೆಯಾಗಿ ತೆಗೆದುಕೊಂಡು ನಾವೇ ಪರಿಶೀಲಿಸಬಹುದು ಒಂದಕ್ಕಿಂತ ಹೆಚ್ಚು ಹೆಂಡಿರಿರುವವರು, ೨ ಅಥವಾ ೩ ಕ್ಕಿಂತ ಹೆಚ್ಚು ಮಕ್ಕಳುಳ್ಳ ೪೦ ಪ್ರಾಯದೊಳಗಿನವರು ನಿಮಗೆ ಇಲ್ಲಿ ಎಷ್ಟು ಜನ ಸಿಗುತ್ತಾರೆ—ಎಣಿಸಿ? ನಮ್ಮ ಕಲ್ಪನೆ ಸರಿಯೆ?

ಹಾಗೂ ಒಂದು ವೇಳೆ—ತುಷ್ಟೀಕರಣವೇ ಇರಲಿ, ಭಾರತಕ್ಕೆ ಅಗೌರವ ಸೂಚಿಸುವುದೇ ಇರಲಿ, ಇಂಥ ಇನ್ನಾವುದೇ 'ತಪ್ಪು' ಅಥವಾ 'ಅಪರಾಧ'ವೇ ಇರಲಿ, ಅದಕ್ಕೆ ತಕ್ಕ ಮದ್ದು ಆಯಾ ರೋಗಕ್ಕೆ ತಕ್ಕಂತೆ ಇರಬೇಕು. ಮಸೀದಿ ಒಡೆಯುವುದೇ ಮದ್ದೆ? ಈಗ ಅಲ್ಲಿ ನಮಾಜ ನಡೆಯುತ್ತಿರಲಿ, ಇಲ್ಲದಿರಲಿ, ೪೬೨ ವರ್ಷಗಳಿಂದ ಅಲ್ಲಿ ಮಸೀದಿ ಇದ್ದುದು ಸುಳ್ಳಲ್ಲವಷ್ಟೆ? ಆ ಎಲ್ಲ ತಪ್ಪುಗಳಿಗೂ ಕಾರಣವಾಗುವ "ಅವರ ಸೊಕ್ಕಿನ ಬೆನ್ನೆಲುಬು ಮುರಿಯುವುದೇ" ಮಸೀದಿ ಒಡೆಯುವುದರ ಉದ್ದೇಶವೆನ್ನುವುದಾದರೆ, ಅದಕ್ಕಾಗಿ ಗಾಂಧೀಜಿಯಂಥವರನ್ನೂ ಕೊಲ್ಲುವುದು 'ದೇಶಭಕ್ತಿ' ಎನ್ನಿಸುವುದಾದರೆ—ಇದೇ ಸಂಚಿಕೆಯಲ್ಲಿನ ಪುಟ್ಟಯ್ಯನವರ ಹಾಗೂ ಈ ಹಿಂದಿನ ಕೆ. ಎಂ. ಗೋಪಾಲ್‌ರವರ ಅನಿಸಿಕೆಗಳ ಹತ್ತಿರಕ್ಕೇ ಬರುತ್ತೇವೆ.

ಇದೆಲ್ಲಕ್ಕಿಂತ, "ರಾಮನ ಜನ್ಮಸ್ಥಾನ"ದಲ್ಲಿ ಪೂಜೆ ಸಲ್ಲಿಸುವುದೇ ನಿಜವಾದ ಉದ್ದೇಶವಾದರೆ ಹಾಲಿ ಮಸೀದಿ ಇರುವ ಸ್ಥಳದಲ್ಲೇ ರಾಮನನ್ನೂ ಪೂಜಿಸಬಹುದು. ಇಂಥ ಸಾಮರಸ್ಯದ ಅನುಭಾವಿಗಳನ್ನೂ ಅಂಥ ಪೂಜಾ ಸ್ಥಳಗಳನ್ನೂ ಅಂದಿನಿಂದ ಇಂದಿಗೂ ಕಾಣಬಹುದಷ್ಟೆ?

ಅದಲ್ಲದೆ, ತಮ್ಮ ನಿರ್ದಿಷ್ಟ ಹಿತಾಸಕ್ತಿಗಳನ್ನು ಪೂರೈಸುವ ಪಕ್ಷವೊಂದು ಅಧಿಕಾರಕ್ಕೆ ಬರುವುದೇ ಗುರಿಯಾದರೆ, ಈ ಎಲ್ಲ ರಕ್ತಪಾತ, ಆಸ್ತಿಪಾಸ್ತಿ ಹಾನಿ, ಶಿಕ್ಷಣ ನಷ್ಟ, ಆರ್ಥಿಕ ದುಃಸ್ಥಿತಿ ಇವೆಲ್ಲವೂ—ಕೆ. ಎಂ. ಗೋಪಾಲ್‌ರವರು ಹೇಳುವಂತೆ—ಅಖಂಡವಾಗಿ ಮುಂದುವರಿಯುತ್ತಿರಬೇಕಾಗುತ್ತದೆ. ಏಕೆಂದರೆ, "ಮಂದಿರ ಕೆಡವಿ ಮಸೀದಿ ಕಟ್ಟಿದ" ಇನ್ನೂ ೩ ಸಾವಿರ ಸ್ಥಳಗಳಿವೆಯಂತೆ. ನಾಯಕರು ಹೇಳುತ್ತ ಹೋದಂತೆ ಈ ಸಂಖ್ಯೆಯೂ ಅಖಂಡವಾಗಿ ಬೆಳೆಯುತ್ತ ಹೋಗಬಹುದು. ಯಾವುದಕ್ಕೂ ಕೋರ್ಟ್ ಒಪ್ಪುವಂಥ ಸಾಕ್ಷ್ಯಾಧಾರಗಳೇನೂ ಬೇಕಿಲ್ಲ; ಎಲ್ಲ ನಂಬಿಕೆಯನ್ನಾಧರಿಸಿದ 'ಹಕ್ಕಿನ' ಪ್ರಶ್ನೆಯಷ್ಟೆ? ....

ಅಡಿಕೆ ಧಾರಣೆ

ಶಿವಮೊಗ್ಗ ೯-೧-೯೧

ಸರಕು : ೪೮೯೬-೫೩೨೪

ಬೆಟ್ಟೆ : ೪೦೦೦-೪೫೧೦

ಗೊರಬಲು : ೨೬೦೦-೨೯೪೪

ಇಡಿ : ೩೪೯೦-೩೮೭೧

ಸಾಗರ ೯-೧-೯೧

ಆಪಿ : ೫೬೮೯

ಇಡಿ : ೪೬೧೯-೪೮೪೯

ಚಾಲಿ : ೪೦೮೯-೪೨೫೬

ಸಿಪ್ಪೆ ಗೋಟು : ೧೮೮೯-೨೦೪೯

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ